**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 23.04.2026**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಾನು ಜೆ ಓ ಸಿ 2 ನೇ ವರ್ಷದವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನ್ಯಾಯಾಲಯದಿಂದ ನನಗೆ ಯಾವುದೇ ನೋಟೀಸು ಬಂದಿರಲಿಲ್ಲ. 1 ನೇ ಪ್ರತಿವಾದಿ ನಿಮ್ಮನ್ನು ನ್ಯಾಯಾಲಯಕ್ಕೆ ಬರಬೇಕೆಂದು ಕೇಳಿಕೊಂಡಿರುತ್ತಾರೆ ಎಂದರೆ ಸರಿ. ಪ್ರಮಾಣಪತ್ರದ ಸಂಗತಿಗಳು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರಮಾಣಪತ್ರ ಸಂಗತಿಗಳನ್ನು ತಯಾರಿಸಲು ನಾನೇ ವಕೀಲರಿಗೆ ಮಾಹಿತಿ ಕೊಟ್ಟೆನು. ವಕೀಲರಿಗೆ ಅವರ ಕಚೇರಿಯಲ್ಲಿ ಮಾಹಿತಿ ಕೊಟ್ಟೆನು. 1 ನೇ ಪ್ರತಿವಾದಿಯ ತಂದೆ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಕುಟುಂಬದ ಸದಸ್ಯರ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹಾಗೂ ಅವರ ತಂದೆ ತಾಯಿ ಹಿಂದೆ ಕೆ ಆರ್ ಪೇಟೆ ತಾಲ್ಲೂಕು, ಅಗಸರಹಳ್ಳಿ ಗ್ರಾಮದಲ್ಲಿ ವಾಸ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಅಗಸರಹಳ್ಳಿಯಲ್ಲಿ 1 ನೇ ಪ್ರತಿವಾದಿಯ ಕುಟುಂಬಕ್ಕೆ ಆಸ್ತಿ ಇತ್ತಾ ಎಂದರೆ ಸಾಕ್ಷಿ ಅಗಸರಹಳ್ಳಿಯ ಬಗ್ಗೆ ನನಗೇನು ಗೊತ್ತಿಲ್ಲ. ಸಾಕ್ಷಿ ಸ್ವತಃ ಮೋದೂರಿನಲ್ಲಿ 5 ಗುಂಟೆ ಜಮೀನು ಹೊಂದಿರುವ ವಿಚಾರ ಗೊತ್ತು ಎಂದು ಹೇಳುತ್ತಾರೆ. 1 ನೇ ಒಪ್ರತಿವಾದಿ ಕುಟುಂಬಕ್ಕೆ ಮೋದೂರಿನಲ್ಲಿ 8 ಗುಂಟೆ ಆಸ್ತಿ ಇತ್ತು ಎಂದರೆ ಸಕ್ಷಿ ಗೊತ್ತಿಲ್ಲವೆಂದು ಹೇಳುತ್ತಾರೆ. ಮೊಪೇದೂರಿನಲ್ಲಿದ್ದ ಆಸ್ತಿಯನ್ನು ವಾದಿಗಳ ತಾಯಿ ಮತ್ತು 1 ನೇ ಪ್ರತಿವಾದಿಯ ತಾಯಿ ಸಣ್ಣಮ್ಮನವರು 1980 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ಈಗ ನನಗೆ 51 ವರ್ಷ. 1 ನೇ ಪ್ರತಿವಾದಿ, ಆತನ ಹೆಂಡತಿ ಮತ್ತು ಮಕ್ಕಳುಗಳು 35 ವರ್ಷಳಿಂದ ನಮ್ಮ ಊರಿನಲ್ಲಿ ವಾಸವಿದ್ದಾರೆ. ಈಗ್ಗೆ 10 ವರ್ಷದ ಹಿಂದೆ 1 ನೇ ಪ್ರತಿವಾದಿ ಮೋದುಾರು ಬಿಟ್ಟು ಬೇಬಿ ಗ್ರಾಮಕ್ಕೆ ಹೋಗಿ ವಾಸವಿದ್ದಾರೆ. 1 ನೇ ಪ್ರತಿವಾದಿ ನಮ್ಮ ಮನೆಗೆ ಕೆಲಸಕ್ಕೆ ಬರುತ್ತಿದ್ದ ಬಗ್ಗೆ ನಮ್ಮ ನಡುವೆ ಲಿಖಿತ ದಾಖಲೆ ಇಲ್ಲ. 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ನಿಮ್ಮ ಮನೆಗೆ ಕೂಲಿಗೆ ಬರುತ್ತಿರಲಿಲ್ಲ ಹಾಗೂ ಬೇರೆ ಕಡೆ ಕೂಲಿಗೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೋದೂರಿನಲ್ಲಿರುವ ಮನೆಯನ್ನು 1 ನೇ ಪ್ರತಿವಾದಿ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ. ಯಾರಿಂದ ಪಡೆದುಕೊಂಡಿದ್ದಾರೆಂದು ನನಗೆ ಖಚಿತವಾಗಿ ಗೊತ್ತಿಲ್ಲ. ಮನೆಗಳು ಈಗ 1 ನೇ ಪ್ರತಿವಾದಿ ಹೆಸರಿನಲ್ಲಿ ಇಲ್ಲ. 1 ನೇ ಪ್ರತಿವಾದಿ ಮನೆಗಳನ್ನು ಬೇರೆ ಯಾರಿಗೋ ಮಾರಾಟ ಮಾಡಿರುತ್ತಾರೆ. 1 ನೇಪ್ರತಿವಾದಿ ಪರವಾಗಿ ನೀವು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. 1980 ನೇ ಇಸವಿಯಿಂದ 1 ನೇತಿವಾದಿ ಹಾಗೂ ವಾದಿಗಳು ಬೇಬಿ ಗ್ರಾಮದಲ್ಲಿ ವಾಸ ಇರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.**

**ಓ ಹೇ ಕೇ ಸ ಇ ಒ**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.**